# ವಾಷಿಂಗ್‌ಟನ್ ಕಾರ್ವರ್

ಎಚ್. ಪಾಂಡುರಂಗ ವಿಠಲ

*ಭಗವತ್ ಶ್ರದ್ಧೆ ಮತ್ತು ಆತ್ಮವಿಶ್ವಾಸ ಎರಡೂ ಕೂಡಿದಾಗ ಎಂಥ ಅದ್ಭುತ ನಡೆಯಬಲ್ಲದು ಎಂಬುದಕ್ಕೆ ನಿದರ್ಶನದಂತಿರುವ ವಾಷಿಂಗ್‌ಟನ್ ಕಾರ್ವರರ ಜೀವನವನ್ನು ನಿರೂಪಿಸಿರುವ ಶ್ರೀ ಪಾಂಡುರಂಗ ವಿಠಲರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಈ ಲೇಖನ ಪ್ರೇಮಾ ರಾಮಕೃಷ್ಣನ್ ಅವರ The Guiding Light ಎಂಬ ಗ್ರಂಥವನ್ನು ಆಧರಿಸಿದೆ.*

ಅಮೆರಿಕೆಯ ಮಿಸ್ಸೌರಿ ರಾಜ್ಯದ ಡೈಮಂಡ್‌ನ ಬಳಿಯ ತೋಟದ ಮನೆ ಜರ್ಮನ್ ಮೂಲದ ಮೋಸೆಸ್ ಹಾಗೂ ಸೂಸನ್ ಕಾರ್ವರ್ ದಂಪತಿಗಳದು. ಇದರಲ್ಲಿ ದುಡಿಯುತ್ತಿದ್ದ ಗುಲಾಮರ ಗುಡಿಸಿಲಿನಲ್ಲಿ ಜಾರ್ಜ್ ವಾಷಿಂಗ್‌ಟನ್ ಕಾರ್ವರ್ ಎರಡನೆಯ ಮಗನಾಗಿ ೧೮೬೪ರಲ್ಲಿ ಜನಿಸಿದ. ಕೆಲವೇ ತಿಂಗಳಲ್ಲಿ ಅವನ ತಂದೆ ಆಕಸ್ಮಿಕವೊಂದರಲ್ಲಿ ಸತ್ತ. ಗುಲಾಮರನ್ನು ಕದ್ದು ಲಾಭಕ್ಕೆ ಮಾರಿಕೊಳ್ಳುವ ದರೋಡೆಕಾರರು ಚಳಿಗಾಲದ ರಾತ್ರಿಯೊಂದರಲ್ಲಿ ತಾಯಿಯನ್ನು ಕದ್ದೊಯ್ದರು. ಅಣ್ಣ ಬಚ್ಚಿಟ್ಟುಕೊಂಡು ತಪ್ಪಿಸಿಕೊಂಡ. ತುಂಬ ಬಡಕಲಾಗಿ ಕೆಮ್ಮುತ್ತಿದ್ದ ಈ ದುರ್ಬಲ ಹಸುಳೆಯನ್ನು ದಾರಿಯಲ್ಲಿ ಒಗೆದು ಹೋಗಿದ್ದರು.

ಕಾರ್ವರ್ ದಂಪತಿಗಳಿಗೆ ಜಾರ್ಜ್‌ನ ತಾಯಿ ಮೇರಿ ಅಚ್ಚುಮೆಚ್ಚು. ಬೆಳಗ್ಗೆ ಎಲ್ಲ ಸೇರಿ ದರೋಡೆಕೋರರನ್ನು ಹುಡುಕಿದರು. ಮೇರಿ ಸಿಕ್ಕದಿದ್ದರೂ ಅರೆಜೀವವಾಗಿ, ಚಳಿಗೆ ಸೆಟೆದು ಬಿದ್ದಿದ್ದ ಮಗು ಸಿಕ್ಕಿತು. ಆರೈಕೆ ಮಾಡಿದರು. ಮಗು ಬದುಕಿಕೊಂಡಾಗ, ಮಕ್ಕಳಿಲ್ಲದ ಸೂಸನ್ ಇದನ್ನು ತನ್ನದೆಂದೇ ತಿಳಿದು ಸಾಕಿದಳು.

ಬಾಲ್ಯವಿಡೀ ಕಾಹಿಲೆಗಳಿಂದ ನರಳಿದ ಜಾರ್ಜ್. ಕೆಮ್ಮಿನಿಂದಾಗಿ ಮಾತು ನಿಧಾನ, ಉಗ್ಗು. ಆದರೆ ಅವನ ಸ್ವಚ್ಛ ಕಣ್ಣುಗಳಲ್ಲಿ ಜೀವವಿತ್ತು. ಅಡಿಗೆ ಮನೆಯಲ್ಲಿ ತಾಯಿ ಸೂಸನ್ನಳಿಗೆ ಸಹಾಯ ಮಾಡುವ ಛಲವಿತ್ತು. ಈ ಮಗುವಿಗೆ ಎಲ್ಲದರ ಮೇಲೆಯೂ ಇರುವ ಆಸಕ್ತಿ ಮತ್ತು ಚುರುಕು ಬುದ್ಧಿಯನ್ನು ಕಂಡು ಅವಳಿಗೆ ಅತಿ ಆಶ್ಚರ್ಯ! ತಾಯಿ ಹೇಳಿಕೊಟ್ಟ ಅಡುಗೆ, ಪಾತ್ರೆ ತೊಳೆಯುವುದು, ಹೊಲಿಯುವುದು ಎಲ್ಲದರಲ್ಲೂ ಪ್ರವೀಣನಾದ, ಕೊನೆಗೆ ಅಣ್ಣನೊಡನೆ ಜಮೀನಿನಲ್ಲೂ ದುಡಿದ. ಕುದುರೆ, ಹಂದಿ, ಕೋಳಿ ನೋಡಿಕೊಳ್ಳುವುದು, ಹಸುವಿನ ಹಾಲು ಕರೆಯುವುದು, ಬಟ್ಟೆ ನೇಯುವುದು, ಮೊಂಬತ್ತಿ ಸೋಪು ತಯಾರಿಕೆ, ಸೌದೆ ಕಡಿಯುವುದು—ಎಲ್ಲ ಕೆಲಸಗಳನ್ನೂ ಕಲಿತ. ಎಲ್ಲದರಲ್ಲೂ ಅಚ್ಚುಕಟ್ಟು.

ಚುರುಕು ಕೈಗಳಷ್ಟೆ ಅಲ್ಲ, ಜಾರ್ಜ್‌ನಿಗೆ ಗಿಡ ಬೆಳೆಸುವಲ್ಲಿ, ರೋಗ ನಿವಾರಿಸಿ ಆರೈಕೆ ಮಾಡುವಲ್ಲಿ ವಿಶೇಷ ಶಕ್ತಿಯಿತ್ತು. ತುಂಬ ಅನುಭವಿ ರೈತರಿಗೆ ಇರುವ ಒಳ ಅರಿವು ಅವನಲ್ಲಿ ಹುಟ್ಟಿನಿಂದಲೇ ಬಂದಿತ್ತು. ಸುತ್ತಲಿನ ತೋಟದವರೆಲ್ಲ ತಮ್ಮ ಗಿಡಗಳ ಕೊರತೆಯ ಬಗ್ಗೆ ಹುಡುಗನನ್ನು ಕೇಳುವುದು ರೂಢಿಯಾಯ್ತು. ಅವನಿಗೋ ಗಿಡಗಳು ಮಕ್ಕಳಂತೆ; ಪ್ರೀತಿಯಿಂದ ಮೃದುವಾಗಿ ಅವನ್ನು ನೋಡಿಕೊಳ್ಳುತ್ತಿದ್ದ. ತೋಟದಲ್ಲಿ ತನಗಾಗಿ ಒಂದು ಜಾಗ ಮಾಡಿಕೊಂಡಿದ್ದ. ಅಲ್ಲಿ ಮಲಗಿ, ಎಲ್ಲ ಗಿಡಗಳು ಬೆಳೆವುದನ್ನು, ಜೀವಚೈತನ್ಯ ತನ್ನ ಸುತ್ತಮುತ್ತ ಸಹಸ್ರ ಕೀಟಗಳಾಗಿ, ಅಳಿಲಾಗಿ, ಹಕ್ಕಿಯಾಗಿ ಕುಣಿದಾಡುವುದನ್ನು ಗಮನಿಸುವುದು ಅವನಿಗೆ ಆನಂದ. ಅಲ್ಲಿ ತಾನು ತಂದಿಟ್ಟುಕೊಳ್ಳುತ್ತಿದ್ದ ರೋಗಗ್ರಸ್ತ ಗಿಡಗಳು ಅವನಿಗೆ ನೂರಾರು ಸಂಗತಿಗಳನ್ನು ತಿಳಿಸುತ್ತಿದ್ದವು. ಮಣ್ಣು ಕೂಡ ಅವನಿಗೆ ಪ್ರಕೃತಿಯ ಬಗೆಗೆ ತಿಳಿಸುತ್ತಿತ್ತು. ಇವೆಲ್ಲವನ್ನೂ ನಿರ್ದೇಶಿಸುವ ಒಂದು ಶಕ್ತಿ ಇದೆಯೆಂದು ಅವನಿಗನಿಸಿತು. ಇದು ದೇವರ ಬಗೆಗಿನ ಅವನ ಮೊದಲ ಯೋಚನೆಯಾಗಿತ್ತು.

"ನೀನು ಶಾಲೆಗೆ ಹೋಗಬೇಕು" ಎಂದಳು ಸೂಸನ್ ಒಂದು ದಿನ. "ನೀಗ್ರೋವಿಗೆ ಎಂತಹ ಓದು?" ಎಂದ ಗಂಡನಿಗೆ "ದೇವರು ತಪ್ಪು ಮಾಡಲಾರ" ಎಂದಳು.

ಆ ಸುತ್ತಿನ ಆದರ್ಶ ದ್ರಾಕ್ಷಿಬೆಳೆಗಾರ ಹರ್ಮನ್ ಜೇಗರನ ತೋಟಕ್ಕೆ ಒಂದು ದಿನ ಮೋಸಸ್ ಹುಡುಗನನ್ನು ಕರೆದೊಯ್ದ. ಮನೆಯಿಂದ ಹೊರ ಊರಿಗೆ ಜಾರ್ಜ್ ಹೋದುದು ಅದೇ ಮೊದಲು. ಹರ್ಮನ್ ಈ ಬಾಲಕನಿಂದ ಪ್ರಭಾವಿತನಾಗಿ ಇವನ ಬೆರಳುಗಳನ್ನು ಪರೀಕ್ಷಿಸಿ, "ಇವು ಬೆಳೆಗಾರನ ಕೈಗಳು! ಇವನು ಸಸ್ಯಗಳಿಗೆ ಜೀವ ತುಂಬಬಲ್ಲ!" ಎಂದು ಉದ್ಗರಿಸಿದ. "ನೀನು ಓದು ಬರಹ ಕಲಿ. ಆಗ ಭೂಮಿ ತನ್ನ ರಹಸ್ಯಗಳನ್ನು ತಿಳಿಸುವಳು" ಎಂದ.

ಹರ್ಮನ್ ಜೇಗರನ ಈ ಮಾತುಗಳು ಜಾರ್ಜ್‌ನಿಗೆ ತುಂಬ ಇಷ್ಟವಾದುವು : "ಈ ತೋಟ, ಆದರಾಚೆಯ ಗಿಡಗಳು, ಕಾಡು, ಬೆಟ್ಟಗಳು ಎಲ್ಲವೂ ದೇವರಿಗೇ ಸೇರಿದ್ದು. ಆ ದೇವರೇ ನಿನ್ನ ತಂದೆ!" ಹಾಗಿದ್ದರೆ, ದೇವರಿದ್ದಾನೆ; ಅಲ್ಲವೆ! ತಾನಿನ್ನು ತಬ್ಬಲಿ ನೀಗ್ರೋ ಶಿಶುವಲ್ಲ!—ಎಂದು ಜಾರ್ಜ್ ಭಾವಿಸಿದ. ಒಂಟಿತನ ಅವನಿಂದ ದೂರವಾಯಿತು. ಜೇಗರ್‌ನು "ನೀನಿವನನ್ನು ಶಾಲೆಗೆ ಹಾಕಬೇಕು" ಎಂದು ಮೋಸೆಸ್‌ನಿಗೆ ಹೇಳಿದ. ಜಾರ್ಜ್‌ನಿಗೆ ಓದಿಕೊಳ್ಳಲು ಸಸ್ಯಗಳ ಬಗೆಗಿನ ಪುಸ್ತಕವೊಂದನ್ನು ನೀಡಿದ.

ಅನಂತರ ಜಾರ್ಜ್‌ಗೆ ಶಾಲೆಯ ಬಗ್ಗೆ ಮೋಸೆಸ್‌ನನ್ನು ಕೇಳುವುದೇ ಕೆಲಸ. ಹತ್ತಿರವಿರುವ ಒಂದೇ ಶಾಲೆ ಲೋಕಸ್ಟ್ ಗ್ರೋವರ್ ಸ್ಕೂಲಿನಲ್ಲಿ ನೀಗ್ರೋಗಳಿಗೆ ಪ್ರವೇಶವಿಲ್ಲ ಎಂಬ ಸತ್ಯ ಹೇಳಲು ಮೋಸೆಸ್‌ನಿಗೆ ಸಂಕಟ. ಕೊನೆಗೂ ಇದು ತಿಳಿದಾಗ, ಜಾರ್ಜ್ ಕಾಡಿನ ಒಂದು ಮೂಲೆಗೆ ಹೋಗಿ, ಮನದಣಿಯೆ ಅತ್ತ. ಚರ್ಮದ ಬಣ್ಣ ಇಂತಹ ಅನ್ಯಾಯಕ್ಕೆ ಕಾರಣವಾಗಬೇಕೆ? ಚಿಕ್ಕಪ್ಪ ಚಿಕ್ಕಮ್ಮ ಮಾಡುತ್ತಿರುವುದನ್ನೆಲ್ಲ ತಾನೂ ಮಾಡುತ್ತಿಲ್ಲವೆ? ಹೂಗಳು ವಿವಿಧ ಬಣ್ಣದವಾದರೇನು? ಎಲ್ಲವೂ ಹೂಗಳೇ ಅಲ್ಲವೆ?

ಬೇಗನೆ ಸೂಸನ್ ಒಂದು ಪಾಠಗಳ ಪುಸ್ತಕ ಹುಡುಕಿ ಓದು ಬರಹ ಕಲಿಸಿದಳು. ಮೋಸೆಸ್ ಸರಳ ಅಂಕಗಣಿತ ಹೇಳಿಕೊಟ್ಟನು. ಇವೆಲ್ಲವನ್ನೂ ಕೆಲ ವಾರಗಳಲ್ಲೆ ನೋಡದೆ ಹೇಳಬಲ್ಲವನಾದ ಜಾರ್ಜ್. ಹೆಚ್ಚಿನದನ್ನು ಕಲಿಯುವ ಆಸೆಯಿಂದ, ಕರಿಯರಿಗೂ ಪ್ರವೇಶವಿರುವ ದೂರದ ನಿಯೋಷೋ ನಗರದ ಶಾಲೆಗೆ ಹೋಗಲು ನಿರ್ಧರಿಸಿದ. ಅವನಿಗೆ ತನ್ನನ್ನು ಕಾಡುವ ಸಹಸ್ರಾರು ಪ್ರಶ್ನೆಗಳಿಗೆ ಉತ್ತರ ಬೇಕಿತ್ತು. ಅಲ್ಲಿ ಇವನು ಜೀವನಕ್ಕೇನು ಮಾಡುತ್ತಾನೆಂದು ಮೋಸೆಸ್ ಅಚ್ಚರಿಪಟ್ಟರೂ, ಜಾರ್ಜ್‌ನಿಗೆ ತನಗೆ ಬರುವ ಅನೇಕ ಕೆಲಸಗಳಿಂದ ಹೇಗೋ ಜೀವನ ನಿರ್ವಹಿಸಬಹುದೆಂದು ವಿಶ್ವಾಸ. ಸೂಸನ್ ಗಂಡನ ಹಳೆಯ ಉಡುಪುಗಳನ್ನು ಕತ್ತರಿಸಿ ಹುಡುಗನ ಅಳತೆಗೆ ಹೊಲಿದುಕೊಟ್ಟಳು. ರೈತನ ಷೂ ಅವನಿಗೆ ಕೊಡಲಾಯಿತು. ಎರಡು ಸೇಬುಗಳು, ಕೆಲ ನಾಣ್ಯಗಳು, ಚಾಕು, ಪ್ರಾಥಮಿಕ ಪಾಠಗಳು ಮತ್ತು ಸಸ್ಯಗಳ ಬಗೆಗಿನ ಎರಡು ಪುಸ್ತಕಗಳು—ಇಷ್ಟೇ ಅವನ ಆಸ್ತಿ.

ಕಷ್ಟದ ಪ್ರಪಂಚದಲ್ಲಿ ಈ ಪುಟ್ಟ ನೀಗ್ರೋ ಎದುರಿಸಬಹುದಾದ ಸಮಸ್ಯೆಗಳ ಅರಿವಿದ್ದ ಸೂಸನ್ ಕಣ್ಣೀರು ಒರೆಸಿಕೊಂಡಳು. ಅವನು ಹೋಗಲೇಬೇಕಿತ್ತು. ದೇವರು ಎಂದೂ ತಪ್ಪುಗಳನ್ನು ಮಾಡಲಾರ ಎಂದು ತನ್ನ ಓದಿನಿಂದ ತಿಳಿಯಬೇಕಿತ್ತು. ಸೂಸನ್ "ಯಾವುದಾದರೂ ದೊಡ್ಡ ಮನೆಯ ಮುಂದೆ ನಿಂತು, ನಾನು ಅಡುಗೆ ಮಾಡಬಲ್ಲೆ ಎಂದು ಹೇಳು" ಎಂಬ ಸಲಹೆ ನೀಡಿದಳು. "ಕೆಲಸಕ್ಕೆ ಸರಿಯಾಗಿ ಹಣ ಪಡೆಯುವುದನ್ನು ಮರೆಯಬೇಡ" ಎಂದ ಮೋಸೆಸ್. ತನಗೆ ತಿಳಿದ ಒಂದೇ ಮನೆಯನ್ನು ಬಿಟ್ಟು ಹೊರಡುವಾಗ ಜಾರ್ಜ್‌ಗೆ ಅಸಹನೀಯ ವೇದನೆಯಾಯ್ತು. ಕಣ್ಣೊರೆಸಿ ತಲೆ ಕೊಡಹಿದ. ಎಷ್ಟೇ ಕಷ್ಟವಾದರೂ ಆತ ಹೋಗಲೇಬೇಕಿತ್ತು. ದೇವರಿಗೆ ಆತನ ಬಗ್ಗೆ ಕೆಲವು ಯೋಜನೆಗಳಿದ್ದವು. ಆತನ ಇಚ್ಛೆಯನ್ನು ಜಾರ್ಜ್ ಪೂರ್ಣಗೊಳಿಸಬೇಕಾಗಿತ್ತು. ಶಾಲೆಗೆ ಸೇರುವುದು ಮೊದಲ ಮೆಟ್ಟಿಲು.

ಹದಿನಾಲ್ಕು ವರ್ಷದ ದುರ್ಬಲ ಬಾಲಕ ಜಾರ್ಜ್ ಬದುಕುವಲ್ಲಿ ತೋರಿದ ಸ್ಥೈರ್ಯ ಅಸಾಧಾರಣ. ಹಸಿವೆ, ಬಳಲಿಕೆಗಳನ್ನು ಲೆಕ್ಕಿಸದೆ, ನಿಯೋಷೋ ತಲುಪುವವರೆಗೆ ನಡೆದೇ ನಡೆದ. ಅಲ್ಲಿ ಒಂದು ನಿರ್ಜನ ಉಗ್ರಾಣವನ್ನು ಹುಡುಕಿ, ಅಲ್ಲಿ ಮಲಗಿದ. ಈ ಕಡೆಗಣಿಸಲ್ಪಟ್ಟ ಉಗ್ರಾಣವೇ ಮುಂದೆ ಅನೇಕ ತಿಂಗಳು ಅವನ ಮನೆ. ಅವನು ತಂದ ಹಣ ಶಾಲೆಗೆ ಸೇರಿಕೊಳ್ಳುವಲ್ಲಿ ಮುಗಿಯಿತು. ಸರಿಹೊಂದದ ಬಟ್ಟೆಗಳಲ್ಲಿ ಆತ ತರಗತಿಯ ಹಾಸ್ಯದ ವಸ್ತುವಾದ. ಆಹಾರಕ್ಕಾಗಿ ಮಾಡದ ಕೆಲಸವಿಲ್ಲ; ಕೆಲಸಕ್ಕಾಗಿ ಬೇಡದ ಮನೆಯಿಲ್ಲ. ಕೆಲಸ ಸಿಗದಾಗ ಉಪವಾಸ. ಆದರೆ ಒಂದು ದಿನವೂ ತನ್ನ ಗುರಿ ಮರೆಯದೆ ಶಾಲೆ ತಪ್ಪಿಸಿಕೊಳ್ಳದೆ ಓದಿದ. ಹುಲ್ಲಿನ ಹಾಸಿಗೆಯಲ್ಲಿ ಮೂಳೆ ಕೊರೆಯುವ ಚಳಿಯಲ್ಲಿ ಹೇಗೋ ಜೀವ ಉಳಿಸಿಕೊಂಡ. ಬದುಕಿರುವುದೇ ಸಂಭ್ರಮ! ದರೋಡೆಕೋರರು ಎಸೆದುಹೋದ ಶಿಶುವಾಗಿದ್ದಾಗಿನಿಂದಲೂ ಆತ ಜೀವಿಸಿರುವುದಕ್ಕಾಗಿ ಹೋರಾಟ ನಡೆಸಿದ್ದನಲ್ಲವೆ? ಏಕೆಂದರೆ, ದೇವರು ಅವನ ಬಗ್ಗೆ ಇಟ್ಟುಕೊಂಡ ಯೋಜನೆಗಳನ್ನು ಆತ ಪೂರ್ಣಗೊಳಿಸಬೇಕಲ್ಲವೆ!

ಬಿತ್ತುವ ಸಮಯದಲ್ಲಿ ಶಾಲೆಗೆ ರಜೆ. ಮಕ್ಕಳೆಲ್ಲ ತಮ್ಮ ತೋಟದಲ್ಲಿ ಸಹಾಯ ಮಾಡಲು ಹೋದರು. ಹೆರ್ಮನ್ ಜೇಗರನ ತೋಟಕ್ಕೆ ಜಾರ್ಜ್ ಹೋದ—ಕೆಲಸಕ್ಕಾಗಿ. ಆದರೆ ಆತ ಸತ್ತಿದ್ದು, ಅವನ ಜಾಗದಲ್ಲಿ ಹೊಸಬನಿದ್ದ. ನಿರಾಶೆಯಿಂದ ಪುನಃ ನಿಯೋಷೋಗೆ ಮರಳಿದ ಜಾರ್ಜ್. ಸುಸ್ತಿನಿಂದಾಗಿ ತನ್ನ ಹಳೆಯ ಉಗ್ರಾಣದಲ್ಲಿ ತುಂಬ ಹೊತ್ತು ಮಲಗಿದ. ಕಣ್ತೆರೆದಾಗ ಎದುರಿಗೆ ಬಿಳಿಯನೊಬ್ಬನಿದ್ದ. ಹಾಗಾದರೆ ಈ ಉಗ್ರಾಣ ಇವನದು! ಜಾರ್ಜ್ ಹೆದರಿ ಅತ್ತ. ಒಡೆಯ ಜಾರ್ಜ್ ಮಾರ್ಟಿನ್ ಹತ್ತಿರದ ಹಿಟ್ಟಿನ ಮಿಲ್‌ನಲ್ಲಿ ಮೇಲ್ವಿಚಾರಕ, ಕರುಣಾಳು. ಹುಡುಗನನ್ನು ಸಮಾಧಾನಪಡಿಸಿ, ಹೆಂಡತಿ ಲೂಸಿಯನ್ನು ಕರೆದು ಊಟ ಹಾಕಿಸಿದ. ಇತ್ತೀಚೆಗೆ ಕಾನೂನು ಪ್ರಕಾರ ಸ್ವತಂತ್ರರಾಗಿ, ಎಲ್ಲಿ ಹೋಗಲೂ ಏನು ಮಾಡಲೂ ತೋರದ ಗುಲಾಮರ ಬಗ್ಗೆ ದಂಪತಿಗಳಿಗೆ ಕನಿಕರ. ಜಾರ್ಜ್‌ನಿಗೆ ಮನೆ ಹಿಂದಿನ ಷೆಡ್‌ನಲ್ಲಿ ಒಂದು ಮಂಚ, ಟೇಬಲು ಹಾಕಿ, ವಾಸಿಸಲು ಜಾಗ ಕೊಟ್ಟ. ಈಗ ನಿಯೋಷೋದಲ್ಲಿ ಜಾರ್ಜ್‌ನಷ್ಟು ಆನಂದ ಪಟ್ಟ ಹುಡುಗರು ಯಾರಿದ್ದಾರು!

ಸೊಗಸಾದ ಊಟ-ಉಪಾಹಾರ ತಯಾರಿಸಿ, ಮನೆಗೆಲಸಗಳನ್ನು ತುಂಬ ಅಚ್ಚುಕಟ್ಟಾಗಿ, ಶುಭ್ರವಾಗಿ ಮಾಡಿ ಜಾರ್ಜ್ ತನ್ನ ದಾತರನ್ನು ಸಂತೋಷಪಡಿಸಿದ. ಅವರೂ ಬಡವರಾಗಿದ್ದರಿಂದ, ಜಾರ್ಜ್ ಕೆಲಸಕ್ಕೆ ತಕ್ಕ ಹಣ ಕೊಡಲು ಆಗುತ್ತಿರಲಿಲ್ಲ. ಹೀಗಾಗಿ ಶಾಲೆಯ ಖರ್ಚುಗಳಿಗಾಗಿ ಸಂಪಾದಿಸಲು ಇತರೆಡೆ ಕೆಲಸ ಮಾಡಲು ಅವನನ್ನು ಒಪ್ಪಿಸಿದರು. ಕೆಲಸ ಮುಗಿದ ಮೇಲೆ ಜಾನ್ ಹುಡುಗನಿಗೆ ಅತ್ಯುತ್ತಮವಾಗಿ ಪಾಠ ಹೇಳಿಕೊಡುತ್ತಿದ್ದ. ಈಗ ಶಾಲೆಯಲ್ಲಿ ಜಾರ್ಜ್‌ನನ್ನು ತಮಾಷೆ ಮಾಡುವವರು ಯಾರೂ ಇಲ್ಲ;ಎಲ್ಲರೂ ಗೌರವಿಸಿ, ಆರಾಧಿಸುವವರೇ!

ದುರದೃಷ್ಟದಿಂದ ಹಿಟ್ಟಿನ ಗಿರಣಿ ಮುಚ್ಚಿತು. ಜಾನ್ ಮಾರ್ಟಿನ್ ಕ್ಯಾಲಿಫೋರ್ನಿಯಾಕ್ಕೆ ಹೋದ. ಏನು ಮಾಡಬೇಕೆಂದು ಯೋಚಿಸುವಾಗ, ಮಾರಿಯಾ ವಾಟ್‌ಕಿನ್ಸ್ ಎಂಬ ನೀಗ್ರೋ ಅಗಸಗಿತ್ತಿ ಜಾರ್ಜ್‌ನ ಸಹಾಯಕ್ಕೆ ಬಂದಳು. ತನ್ನವರ ಜತೆಯಲ್ಲಿರಲು ಜಾರ್ಜ್‌ಗೆ ಸಂತಸ. ಬೇಗನೇ ಬಟ್ಟೆ ಒಗೆಯುತ್ತಲೇ ಓದಿಕೊಳ್ಳುವುದನ್ನು ಕಲಿತ. ಮಾರಿಯಾಗೆ ಒಗೆಯುವ ಕೆಲವು ಗುಟ್ಟುಗಳನ್ನು ಹೇಳಿಕೊಟ್ಟ. ಮಾರಿಯಾ ಅವನು ಓದಲು ಪ್ರೋತ್ಸಾಹಿಸಿದುದಲ್ಲದೆ, ತನ್ನ ವಿದ್ಯಾಭ್ಯಾಸ ಮುಗಿದ ಮೇಲೆ ನೀಗ್ರೋ ಜನರಿಗೆ ವಿದ್ಯೆ ಕಲಿಸಬೇಕೆಂದು ಪ್ರಭಾವಪೂರ್ಣವಾಗಿ ಹೇಳುತ್ತಿದ್ದಳು. ಕೇಳಿದವರು ಕಣ್ಣೀರಿಡುವಂತೆ, ಮನಮುಟ್ಟುವಂತೆ ಬೈಬಲ್ ಓದಲು ಕಲಿತ ಜಾರ್ಜ್. ಹಿಂದೆ ಉಗ್ಗುತ್ತಿದ್ದ, ಧ್ವನಿ ಏಳದಿದ್ದ ಬಾಲಕನ ಸಾಧನೆ ಇದು.

ಒಂದೆರಡು ವರ್ಷದಲ್ಲಿಯೇ ಆ ಶಾಲೆಯ ಓದು ಮುಗಿದು, ಫೋರ್ಟ್‌ಸ್ಕಾಟ್ ನಗರದ ಶಾಲೆಗೆ ಸೇರಿದ. ಅಲ್ಲಿ ವಸತಿಗೃಹವೊಂದರಲ್ಲಿ ಕೆಲಸ ಮಾಡುತ್ತ ಅಲ್ಲಿಗೆ ಬಂದು ಹೋಗುವ ಪ್ರಯಾಣಿಕರಿಂದ ತುಂಬ ವಿಷಯಗಳನ್ನು ತಿಳಿದ. ಪಟ್ಟಣದ ಉಸಿರುಗಟ್ಟಿಸುವ ವಾತಾವರಣದಿಂದ ಪಾರಾಗಲು ತನ್ನ ನೆನಪಿನಿಂದ ದ್ರಾಕ್ಷಿ ತೋಟಗಳ ಚಿತ್ರಗಳನ್ನು ಬರೆದು ಸುತ್ತ ಇಟ್ಟುಕೊಂಡ. ಆದರೆ ಒಂದು ದಿನ ಗುಂಪೊಂದು ದೊಂಬಿ ಮಾಡಿ ನೀಗ್ರೋ ಒಬ್ಬನನ್ನು ಜೀವಂತ ಸುಟ್ಟು ಹಾಕಿದ್ದನ್ನು ಕಂಡು, ಭಯದಿಂದ ನಡುಗಿ, ಬಚ್ಚಿಟ್ಟುಕೊಂಡ. ತನ್ನನ್ನೂ ಹಾಗೆ ಕೊಂದರೆ—ಎನ್ನಿಸಿ, ಆ ನಗರವನ್ನು ತ್ಯಜಿಸಿ, ಪಶ್ಚಿಮದ ರಾಜ್ಯಗಳಲ್ಲೆಲ್ಲ ಸುತ್ತಾಡಿದ. ಈಗ ಆರು ಅಡಿ ಎತ್ತರ ಬೆಳೆದ ಜಾರ್ಜ್ ಬಗ್ಗಿ ಕೆಲಸ ಮಾಡಿ ಮಾಡಿ, ಸ್ವಲ್ಪ ಬಾಗಿದ್ದ; ಉಗ್ಗುತ್ತಿರಲಿಲ್ಲ, ಏರುಧ್ವನಿ ಹಾಗೇ ಉಳಿದಿತ್ತು. ನ್ಯೂ ಮೆಕ್ಸಿಕೋ ಅಲೆಮಾರಿಗಳ ಜತೆ ಸ್ವಲ್ಪ ಸಮಯ ಸುತ್ತಾಡಿದ ಜಾರ್ಜ್ ಮರುಭೂಮಿಯ ಮಣ್ಣನ್ನು ವಿಶ್ಲೇಷಿಸಿದ. ಅವನು ಚಿತ್ರಿಸಿದ ಮರುಭೂಮಿಯ ಹೂವಿನ ವರ್ಣಚಿತ್ರಕ್ಕೆ ವಿಶ್ವ ಕೊಲಂಬಿಯನ್ ಪ್ರದರ್ಶನದಲ್ಲಿ ಬಹುಮಾನ ಬಂತು.

ಪುನಃ ಶಾಲೆ ಸೇರಿದ, ಈ ಸಲ ತನ್ನದೇ ಅಂಗಡಿ ತೆರೆದ. ಶಾಲೆಯಲ್ಲಿ ಎಲ್ಲರ ಇಷ್ಟದ ಹುಡುಗನಾಗಿ ಚುನಾಯಿತನಾದ. ಹೈಸ್ಕೂಲು ಮುಗಿಯುವಾಗ ಅವನ ಅಣ್ಣ ಸಿಡುಬಿನಿಂದ ತೀರಿದ ಸುದ್ದಿ ಬಂತು. ಈಗ ವಿಶಾಲ ಜಗತ್ತಿನಲ್ಲಿ ಆತ ಒಬ್ಬಂಟಿ.

ಕನ್ಸಾಸ್ ಈಶಾನ್ಯ ಮೂಲೆಯಲ್ಲಿದ್ದ ಹೈಲ್ಯಾಂಡ್ ಎಂಬ ಪುಟ್ಟನಗರದ ಕಾಲೇಜಿಗೆ ಅರ್ಜಿ ಸಲ್ಲಿಸಿದ; ಕೂಡಲೆ ಸೇರಿಕೊಳ್ಳಲು ಕರೆ ಬಂತು. ಹೋದ. ಪ್ರಿನ್ಸಿಪಾಲರಿಗೆ ಇವನನ್ನು ನೋಡಿ ಸಂತೋಷವಾಗಲಿಲ್ಲ. "ನಮ್ಮಲ್ಲಿ ತಪ್ಪಾಗಿದೆ. ಈ ಕಾಲೇಜಿನಲ್ಲಿ ನೀಗ್ರೋಗಳನ್ನು ಸೇರಿಸಿಕೊಳ್ಳಲಾರೆವು" ಎಂದು ಹೇಳಿದರು. ಆದರೆ ಅರ್ಜಿ ಫಾರ್ಮುಗಳಲ್ಲಿ ಈ ಅಂಶ ಇರಲಿಲ್ಲ. ತನ್ನೆದುರಿನ ತರುಣನಲ್ಲಿ ಹೆಪ್ಪುಗಟ್ಟಿದ ನಿರಾಶೆಯನ್ನು ಗಮನಿಸಿ, ಪ್ರಿನ್ಸಿಪಾಲರೆಂದರು: "ನೀನು ಹೇಗೂ ಹೈಸ್ಕೂಲು ಮುಗಿಸಿದ್ದೀ. ನಿಮ್ಮ ಜಾತಿಯವರಿಗೆ ಇಷ್ಟು ಸಾಕು." ಜಾರ್ಜ್ ಬಾಗಿಲತ್ತ ನಡೆದು, ಹೇಳಿದ: "ಕಾಲ ದೇವರಿಗೆ ಸೇರಿದ್ದು, ನಾನು ಮಾಡಬೇಕಾದ ಕೆಲಸ ಇದೆ; ಸಿದ್ಧನಾಗಬೇಕು. ಅದಕ್ಕಾಗಿ ನಾನು ಕಾಲೇಜಿಗೆ ಹೋಗಿಯೇ ತೀರುತ್ತೇನೆ." ಬಾಗಿಲು ಮೆಲ್ಲನೆ ಮುಚ್ಚಿ ಜಾರ್ಜ್ ಹೊರನಡೆದ. ಸೆಕೆಯ ಬಿಸಿಲು ಅವನಿಗೆ ತಾಗಲಿಲ್ಲ—ಹೃದಯದಲ್ಲಿನ ಚಳಿಯಿಂದ ನಡುಗಿದ. ತನ್ನ ಚರ್ಮದ ಬಣ್ಣದಿಂದಾಗಿ, ಎರಡನೆಯ ಬಾರಿಗೆ ಆತ ನೋವಿಗೀಡಾಗಿದ್ದ. ಹೈಸ್ಕೂಲಿನಲ್ಲಿ ಅತ್ಯುನ್ನತ ಮಟ್ಟ ಗಳಿಸಿಯೂ ಇಲ್ಲಿ ಅವನಿಗೆ ಜಾಗವಿಲ್ಲ. ಹೀಗೇಕೆ? ಅವನ ಕನಸುಗಳು, ಆಸೆಗಳು ನುಚ್ಚುನೂರಾದುವು. ಕಾಲವೂ ಮುಗಿಯುತ್ತ ಬಂತು. ಹಣವೂ ಇಲ್ಲ, ನೆಲೆಯೂ ಇಲ್ಲ.

ಕ್ರಮೇಣ ಜಾರ್ಜ್ ಶಾಂತನಾದ. ದೇವರು ಅವನನ್ನು ಇನ್ನಷ್ಟು ಕಾಯಿಸುತ್ತಿರಬಹುದು. ಒಂದು ಪಾಳು ಉಗ್ರಾಣದಲ್ಲಿ ರಾತ್ರಿ ಮಲಗಿದ್ದು, ತಿರುಗಾಟ ಮುಂದುವರೆಸಿದ. ಸರ್ಕಾರದವರು ಕೊಡಮಾಡುತ್ತಿದ್ದ ಜಮೀನನ್ನು ಪಡೆದು, ನೂರರವತ್ತು ಎಕರೆ ಭೂಮಿಯಲ್ಲಿ ಉಳುಮೆ ನಡೆಸಿದ. ತನಗೆ ಮನೆ ಕಟ್ಟಿಕೊಂಡ. ಏಕಾಂತದಲ್ಲಿ ತನ್ನ ನಿರಾಶೆ, ದುಃಖಗಳನ್ನು ಸಂಬಾಳಿಸಿದ. ಓದು, ಚಿತ್ರ ರಚನೆಯಲ್ಲಿ ತೊಡಗಿದ. ತನ್ನ ಸ್ಥಿತಿಗಾಗಿ ದುಃಖಿಸಲಿಲ್ಲ—ಆತ್ಮಮರುಕ ಕೆಟ್ಟದ್ದೆಂದೂ ಎಲ್ಲಕ್ಕೂ ಕೆಲಸವೇ ಒಳ್ಳೆಯ ಮದ್ದೆಂದೂ ಅವನಿಗೆ ಅರಿವಿತ್ತು. ಮತ್ತೆ ಎಂದಿನ ಉಲ್ಲಾಸದ ಮನಸ್ಥಿತಿಗೆ ಹಿಂತಿರುಗಿ, ಎಲ್ಲವನ್ನೂ ತನ್ನ ಕೈಯಲ್ಲಿ ತೆಗೆದುಕೊಂಡ. ಜೀವನ ಕಷ್ಟಕರವಾಗಿತ್ತು; ಅವನಿಗೆ ಮಿತವ್ಯಯ ಮತ್ತು ಕಷ್ಟದ ದುಡಿಮೆಯ ಬೆಲೆ ತಿಳಿಯಿತು.

ಪುನಃ ತನ್ನ ಗುರಿಯನ್ನು ಅರಸಿ ಪ್ರಯಾಣ ಮುಂದುವರೆಸಿದ. ಈಗ ಅವನು ಉಲ್ಲಾಸದ, ಆತ್ಮವಿಶ್ವಾಸದ ತರುಣ. ಅಯೋವಾದ ಹೋಟಲೊಂದರಲ್ಲಿ ಕೆಲವು ಕಾಲ ಅಡುಗೆಯವನಾದ. ಅಲ್ಲಿನ ಚರ್ಚಿನಲ್ಲಿ ಹಾಡಿದ. ಇವನ ಸಂಗೀತದಿಂದ ಪ್ರಭಾವಿತಳಾದ ಮಿಸೆಸ್ ಮಿಲ್‌ಹಾಲಂಡ್ ಎಂಬ ಸಂಗೀತ ಶಾಸ್ತ್ರಜ್ಞೆ ಇವನನ್ನು ಮನೆಗೆ ಕರೆದೊಯ್ದು ತನ್ನ ಪಿಯಾನೋ ಕೇಳಿಸಿದಳು. ಅವಳಿಗೆ ಚಿತ್ರರಚನೆ ಹೇಳಿಕೊಟ್ಟು, ಅವಳಿಂದ ಇನ್ನಷ್ಟು ಸಂಗೀತ ಕಲಿತ ಜಾರ್ಜ್. ಅವರ ಮನೆಯವರಿಗೆಲ್ಲ ಪ್ರೀತಿಪಾತ್ರನಾದ. ಒಮ್ಮೆ ಮಿಲ್‌ಹಾಲಂಡರ ಮನೆಗೆ ಬಂದಿದ್ದ ಅವರ ಬಂಧುವೊಬ್ಬ ಇಂಡಿಯನೋಲಾದಲ್ಲಿ ಅಬ್ರಹಾಂ ಲಿಂಕನ್ನನ ಸ್ನೇಹಿತ ಬಿಷಪ್ ಮ್ಯಾಥ್ಯೂ ಸ್ಥಾಪಿಸಿದ ಸಿಂಪ್ಸನ್ ಕಾಲೇಜಿನಲ್ಲಿ ನೀಗ್ರೋಗಳನ್ನು ಸೇರಿಸಿಕೊಳ್ಳುವರೆಂಬ ವಿಷಯ ತಿಳಿಸಿದ. ಅನೇಕ ಕೆಲಸಗಳನ್ನು ಮಾಡಿ ಜಾರ್ಜ್ ಹಣ ಕೂಡಿಸಿ, ನಡೆದೇ ಹೋಗಿ ಸಿಂಪ್ಸನ್ ಕಾಲೇಜಿಗೆ ಸೇರಿದ.

ಜಾರ್ಜ್‌ನಿಗೆ ಚಿತ್ರಕಲಾವಿದನಾಗಿ ಜೀವಿಸಬೇಕೆಂದು ಆಸೆಯಿತ್ತು. ಆದರೆ ಅವನ ಶಿಕ್ಷಕಿ ಎಟ್ಟಾ ಬಡ್ ಅದು ಅಸಾಧ್ಯ

ವೆಂದಳು. "ನೀನೇನೋ ಚೆನ್ನಾಗಿ ಚಿತ್ರ ರಚಿಸುತ್ತೀ. ಆದರೆ ಕೇವಲ ಕೆಲವೇ ಕಲಾವಿದರು ಚಿತ್ರರಚನೆಯಿಂದ ಜೀವಿಸಬಲ್ಲರು ಅಲ್ಲದೆ...." ಎಂದು ನಿಲ್ಲಿಸಿದಳು. "ನಾನು ಕರಿಯ" ಎಂದು ಜಾರ್ಜ್ ಆ ಮಾತನ್ನು ಪೂರ್ಣಗೊಳಿಸಿದ. "ಜೀವಮಾನವಿಡೀ ಇನ್ನೊಬ್ಬರ ಬಟ್ಟೆ ಒಗೆದೇ ಕಳೆಯುತ್ತೀಯಾ?" ಎಂದಳು ಬಡ್. ಜಾರ್ಜ್ ಏನು ಮಾಡಲಿ ಎಂದು ನಿರುತ್ತರನಾದ. "ಅಯೋವಾ ಕೃಷಿ ಕಾಲೇಜಿನಲ್ಲಿ ಪ್ರೊಫೆಸರ್ ಆಗಿರುವ ನನ್ನ ತಂದೆಗೆ ನಿನ್ನ ಚಿತ್ರಗಳನ್ನು ತೋರಿಸಿದೆ. ನೀನು ಕೃಷಿವಿಜ್ಞಾನ ಕಲಿಯಬಹುದೆಂದು ಅವರು ಹೇಳಿದರು" ಎಂದಳು ಬಡ್.

ಕೃಷಿ ರಸಾಯನ ವಿಜ್ಞಾನ, ಸಸ್ಯಶಾಸ್ತ್ರಗಳ ಕ್ಷೇತ್ರದಲ್ಲಿ ಅಯೋವಾ ಕೃಷಿ ಕಾಲೇಜು ದೇಶದ ಶಿಕ್ಷಣ ಸಂಸ್ಥೆಗಳಲ್ಲೆಲ್ಲ ಪ್ರಸಿದ್ಧವಾಗಿತ್ತು. ಉತ್ತಮ ಅರ್ಹತೆ ಹೊಂದಿದ್ದ ಜಾರ್ಜ್ ಅಲ್ಲಿ ಸುಲಭವಾಗಿ ಸೇರಿದ. ಹಾಸ್ಟೆಲಿನಲ್ಲಿ ನೀಗ್ರೋಗಳನ್ನು ಸೇರಿಸುತ್ತಿರಲಿಲ್ಲ. ಆದರೆ ಪ್ರಾಯೋಗಿಕ ಕ್ಷೇತ್ರದ ನಿರ್ದೇಶಕ ಪ್ರೊ. ವಿಲ್ಸನ್ ಜಾರ್ಜ್‌ನಿಗೆ ತನ್ನ ಆಫೀಸಿನಲ್ಲೆ ವಾಸಿಸಲು ಹೇಳಿದ. ಕಾವಲುಗಾರ, ಸೇವಕ, ಪ್ರಯೋಗಶಾಲೆ ಸಸ್ಯೋದ್ಯಾನಗಳ ಪಾಲಕ ಇತ್ಯಾದಿ ಅನೇಕ ಚಿಲ್ಲರೆ ಕೆಲಸಗಳನ್ನು ಮಾಡಿಕೊಂಡು ಜೀವಿಸುತ್ತ ಜಾರ್ಜ್ ಕಾಲೇಜಿನ ಓದಿನಲ್ಲೂ ಮುಂದುವರಿದ. ಸಮಯ ಇದ್ದಾಗ, ಕಾಲೇಜಿನ ಆಚೆ ಇದ್ದ ಜೌಗು ಪ್ರದೇಶದ ಮಣ್ಣಿನ ವಿಶ್ಲೇಷಣೆ, ಅಲ್ಲಿ ಬೆಳೆದ ಹುಲ್ಲು, ಕಳೆಗಳನ್ನು ಅಧ್ಯಯನ ಮಾಡಿದ. ೧೮೯೪ರಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಕಾಲೇಜಿನಿಂದ ತೇರ್ಗಡೆಯಾದ. ವಿಶ್ವ ಕೊಲಂಬಿಯ ಪ್ರದರ್ಶನದಲ್ಲಿ ಅವನು ರಚಿಸಿದ ನಾಲ್ಕು ವರ್ಣಚಿತ್ರಗಳನ್ನು ಕಲಾವಿಭಾಗದಲ್ಲಿ ಇರಿಸಿದ್ದರು. ರಾಷ್ಟ್ರರಕ್ಷಕ ದಳದಲ್ಲಿ ಕ್ಯಾಪ್ಟನ್ ಆಗಿ ಸೇರಿದ ಪ್ರಥಮ ನೀಗ್ರೋ ಆದ. ಅನಂತರ ಪದವಿ ದಾನ ಸಮಾರಂಭದಲ್ಲಿ ಆತನಿಗೆ ಹೆಚ್ಚು ಚಪ್ಪಾಳೆ. ಅವನನ್ನು ಶಿಕ್ಷಕನನ್ನಾಗಿ ಕೆಲಸಕ್ಕೆ ತೆಗೆದುಕೊಂಡರು. ಶಿಕ್ಷಕನಾಗಿ ಜಾರ್ಜ್ ಇನ್ನಷ್ಟು ಪ್ರಸಿದ್ಧನೂ ಗೌರವಾನ್ವಿತನೂ ಆದ.

ಆದರೆ ಪ್ರೊಫೆಸರ್ ಕಾರ್ವರ್ ಸಂತೋಷವಾಗಿದ್ದನೆ? ಒಬ್ಬಂಟಿಯಾಗಿದ್ದಾಗ ತನ್ನ ಜೀವಿತದ ಕನಸುಗಳ ಬಗ್ಗೆ ಸಂಶಯಗಳು ಆವರಿಸುತ್ತಿದ್ದವು. ದಂತಗೋಪುರದಲ್ಲಿ ಕುಳಿತು ಆತ ತನ್ನ ಜನರಿಗೆ ಸೇವೆ ಸಲ್ಲಿಸುವುದು ಸಾಧ್ಯವೇ? ಮಾರಿಯಾಳ ಮಾತುಗಳು ನೆನಪಿಗೆ ಬರುತ್ತಿದ್ದವು : "ನೀನು ಸಾಕಷ್ಟು ಕಲಿತಮೇಲೆ, ಅದನ್ನು ನಿನ್ನವರಿಗೆ ನೀಡು. ಕಪ್ಪುಜನ ವಿದ್ಯೆಯ ಹಸಿವಿನಿಂದ ನರಳುತ್ತಿದ್ದಾರೆ." ಆದರೆ ಇದು ಹೇಗೆ ಸಾಧ್ಯ?

ಇದೇ ಸಮಯದಲ್ಲಿ, ಇನ್ನೊಬ್ಬ ಪ್ರಸಿದ್ಧ ನೀಗ್ರೋ ಬೂಕರ್ ಟಿ.ವಾಷಿಂಗ್ಟನ್‌ನಿಂದ ಅಲಬಾಮಾದ ಟಸ್ಕೆಗೀ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡಲು ಅವನಿಗೊಂದು ಪತ್ರ ಬಂತು. ಆ ರಾಜ್ಯ ತುಂಬ ಹಿಂದುಳಿದಿತ್ತು. ಜನರು ಅಶಿಕ್ಷಿತರು. ನೆಲ ಏನನ್ನೂ ಬೆಳೆಯಲಾರದಷ್ಟು ಬರಡು. ಬೂಕರ್ ಹೀಗೆ ಬರೆದಿದ್ದ: "ನನ್ನ ಜನರಿಗೆ ಓದುಬರಹ ಕಲಿಸಬಲ್ಲೆ. ಶಾಲೆಯೊಂದನ್ನು ಅವರು ಕಟ್ಟಿಕೊಳ್ಳುವಂತೆ ಸಹಾಯ ಮಾಡಿದ್ದೇನೆ. ಆದರೆ ಅವರಿಗೆ ಅನ್ನ ಹಾಕಲಾರೆ. ಹೀಗಾಗಿ ಅವರು ಹಸಿದೇ ಇದ್ದಾರೆ."

ಅಯೋವಾ ಕಾಲೇಜಿನವರಿಗೆ ನಿರಾಸೆಯಾದರೂ ಕಾರ್ವರ್ ಗಂಟುಮೂಟೆ ಕಟ್ಟಿ ಹೊರಟ. ಜೀವನದ ಸುದೀರ್ಘ ಹೋರಾಟ ಮುಗಿದಿತ್ತು. ಪ್ರಕೃತಿಯ ಗುಟ್ಟುಗಳನ್ನು ಬಹಿರಂಗ ಪಡಿಸುವ ಕಾಲ ಬಂದಿತ್ತು—ಜಾರ್ಜ್ ತನ್ನ ಶಿಕ್ಷಣವನ್ನು ಉಪಯೋಗಕ್ಕೆ ಇಳಿಸುವ ಕಾಲ. (ಮುಂದುವರೆಯುತ್ತದೆ.)

## ಜ್ಞಾನ ದೇವರು ಕೊಟ್ಟಿದ್ದು. ಅದನ್ನು ಮಾರಲಾರೆ. ಅದು ಎಲ್ಲರಿಗೂ ಸೇರಿದ್ದು.

"ದೇವರು ನೆಲಗಡಲೆ ಸೃಷ್ಟಿಗೆ ಹಣ ಪಡೆಯುವುದಿಲ್ಲ. ಅದರ ರೋಗ ವಾಸಿಮಾಡುವುದಕ್ಕೆ ನನಗೆ ಹಣ ಏಕೆ? ಅಲ್ಲದೆ ಹಣ ನನಗೆ ನನ್ನ ಜನಗಳನ್ನೇ ಮರೆಸೀತು. ಜ್ಞಾನ ದೇವರು ಕೊಟ್ಟಿದ್ದು. ಅದನ್ನು ಮಾರಲಾರೆ. ಅದು ಎಲ್ಲರಿಗೂ ಸೇರಿದ್ದು." ನೆಲಗಡಲೆ ಬೆಳೆಗೆ ಬಂದ ರೋಗ ವಾಸಿ ಆದುದಕ್ಕೆ ರೈತರು ಗೌರವದಿಂದ ಕಳಿಸಿದ್ದ ಚೆಕ್ ಅನ್ನು ಮೇಲಿನ ಮಾತಿನೊಂದಿಗೆ ಸೌಜನ್ಯಪೂರ್ಣವಾಗಿ ವಾಪಸ್ ಕಳುಹಿಸಿದ ಮಹಾನುಭಾವ ಯಾರು ಗೊತ್ತೇ? ಆತನೇ ಬಿಳಿಯ ಜನಾಂಗವಿಡೀ ತುಚ್ಛವಾಗಿ ಕಾಣುತ್ತಿದ್ದ ನೀಗ್ರೋ ಜನಾಂಗದಲ್ಲಿ ಜನ್ಮವೆತ್ತಿ ಅಸಂಖ್ಯಾತ ವಸ್ತುಗಳ ಮೊದಲಿಗನೆನಿಸಿದ್ದ ಮಹಾವಿಜ್ಞಾನಿ ಜಾರ್ಜ್ ವಾಷಿಂಗ್‌ಟನ್ ಕಾರ್ವರ್.

(ಸಂಗ್ರಹ :ಹಿರಿಯರ ಹಾದಿ)

"ನೀನು ಮಾಡಬಹುದಾದ್ದನ್ನು ಇತರರಿಂದ ಮಾಡಿಸಬೇಡ" ಎಂಬ ಹಳೆಯ ಸೂಕ್ತಿಯನ್ನು ನಾನು ಈಗ ಆದರಿಸುವುದಿಲ್ಲ. ಇದರ ಬದಲು ನನ್ನ ಧ್ಯೇಯವೇನೆಂದರೆ : 'ಬೇರೆಯವರೂ ಮಾಡಬಹುದಾದ್ದನ್ನು ನೀನು ಮಾಡಬೇಡ.'

*—ಬೂಕರ್ ಟಿ.ವಾಷಿಂಗ್‌ಟನ್*